ವಿಷಯ : ಗ್ರಾಮೀಣ ಪ್ರದೇಶಗಳಲ್ಲಿ ಉಚಿತ ನಿವೇಶನಗಳ ಹಂಚಿಕೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೯೩ (೮೬೫).

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನ ರಹಿತರಿಗೆ ಉಚಿತ ನಿವೇಶನಗಳನು ಹಂಚಿ ಬಹಳ ವರ್ಷಗಳು ಆಗಿರುವದರಿಂದ ತ್ವರಿತವಾಗಿ ಉಚಿತ ನಿವೇಶನಗಳನು ಹಂಚಲು ಸರ್ಕಾರ ನಿರ್ಧಾರ ಕೈಕೊಂಡಿದೆಯೊ ?

ಆ) ಮಂಡಲ ಪಂಚಾಯತಿಗಳಲ್ಲಿ ಹಣದ ಕೊರತೆಯಿಂದಾಗಿ ನಿವೇಶನಗಳನ್ನು ಹಂಚಲು ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಹೌದು. ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನ/ವಸತಿ ಹೀನರನ್ನು ಗುರುತಿಸಲಾದ ಒಟ್ಟು ಸಂಖ್ಯೆಯನ್ನು ತಿಳಿಸುವಂತೆ ಎಲ್ಲಾ ಜಿಲ್ಲಾ ಪರಿಷತ್‌ಗಳಿಗೆ ನಿರ್ದೇಶನವನ್ನು ಈಗಾಗಲೇ ನೀಡಲಾಗಿದೆ

ಆ) ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಸುಮಾರು ೧೫ ವರ್ಷಗಳಿಂದಲೂ ಗ್ರಾಮೀಣ ಪ್ರದೇಶಗಳಲ್ಲಿ ಉಚಿತ ನಿವೇಶನಗಳನ್ನು ಹಂಚದೇ ಇರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆದರ ಒಗ್ಗೆ ತರಾತುರಿಯಿಂದ ಏನು ಕ್ರಮ ಕೈಗೊಳ್ಳಬೇಕೆಂದು ತಾವು ಇದ್ದೀರಿ. ನನ್ನ ಚಾಮರಾಜನಗರ ಒಂದೇ ತಾಲ್ಲೂಕಿನಲ್ಲಿ ನಿವೇಶನಗಳನ್ನು ಕೊಡುವುದಾದರೆ ಕನಿಷ್ಟ ನೀವು ೫೫ ಸಾವಿರ ನಿವೇಶನಗಳನ್ನು ಕೊಡಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಎಷ್ಟು ನಿವೇಶನಗಳ ಹಂಚಿಕೆಗಾಗಿ ಜನರು ಕಾದಿದ್ದಾರೆ. ಇದರ ಬಗ್ಗೆ ತ್ವರಿತವಾಗಿ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಏನಾದರೂ ನಿರ್ಧಾರ ಮಾಡಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಈಗ ಸುಮಾರು ಒಂಬತ್ತು ಜಿಲ್ಲೆಗಳಿಂದ ಮನೆ ನಿವೇಶನಗಳ ಬೇಡಿಕೆಯನ್ನು ನಾವು ತರಿಸಿದ್ದೇವೆ. ಹಾಗೆಯೇ ಉಳಿದ ಜಿಲ್ಲೆಗಳ ಬೇಡಿಕೆಗಳನ್ನು ನಾವು ತರಿಸಿಕೊಂಡು ಪುನರ್ವಸತಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಪ್ರಯತ್ನ ಮಾಡುತ್ತಿದ್ದೇವೆ. ತಮಗೆಲ್ಲಾ ಗೊತ್ತಿರಬೇಕು. ನಾನು ಹಿಂದೆ ರೆವಿನ್ಯೂ ಮಂತ್ರಿಯಾಗಿದ್ದಾಗ ಮತ್ತು ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಯಾಗಿದ್ದಾಗ ಈ ಕೆಲಸವನ್ನು ಪ್ರಾರಂಭ ಮಾಡಿದೆ. ಅಲ್ಲಿಂದ ಸುಮಾರು ಒಂಬತ್ತು ಲಕ್ಷ ಕೊಟ್ಟಿದ್ದೇವೆ. ಇದು ನನ್ನ ಜ್ಞಾಪಕಶಕ್ತಿ ಇದ್ದ ಹಾಗೆ ಹೇಳುತ್ತಿದ್ದೇನೆ.

ಈಗ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಅದಕ್ಕನುಗುಣವಾಗಿ ನಾವು ಆವರಿಗೆಲ್ಲಾ ನಿವೇಶನ ಒದಗಿಸತಕ್ಕ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಇವರ ಬಗ್ಗೆ ಅಂಕಿಅಂಶಗಳನ್ನು ತರಿಸಿಕೊಂಡು ಸಮಗ್ರವಾಗಿ ಒಂದು ತೀರ್ಮಾನವನ್ನು ತೆಗೆದುಕೊಂಡು, ಜವಿೂನು ಅಕ್ವೈರ್ ಮಾಡಿ, ಬಡ ಜನರಿಗೆ ನಿವೇಶನ ಹಂಚತಕ್ಕ ವ್ಯವಸ್ಥೆ ಮಾಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಹೆಚ್. ರಂಗನಾಥ : ಯಾವ ಸಾಲಿನಲ್ಲಿ, ಯಾವ ವರ್ಷದಲ್ಲಿ ಇಂತಿಷ್ಟು ಜನ ನಿವೇಶನ ರಹಿತರಿದ್ದಾರೆ ಎಂಬುದನ್ನು ಕೊನೆಯಬಾರಿಗೆ ಗುರ್ತಿಸಲಾಗಿತ್ತು ? ಆವತ್ತು ಇದ್ದಂಥ ಸಂಖ್ಯೆ ಎಷ್ಟು ? ಇವತ್ತು ಇಂತಿಷ್ಟು ಜನರು ನಿವೇಶನ ರಹಿತರು ಎಂಬ ಅಂಕಿ ಅಂಶಗಳು ಏನಾದರೂ ಸರ್ಕಾರದಲ್ಲಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ : ಈಗಿನ ವರದಿಯ ಪ್ರಕಾರ ೯ ಜಿಲ್ಲೆಗಳಲ್ಲಿ ಖ.ಕ೧,೫೮೭

Sri. K. H. Ranganath : Will the Hon. Minister tell me when the identification was done last in the State.

ಈ ೯೦ ಜಿಲ್ಲೆಗಳಲ್ಲಿ ಇಂತಿಷ್ಟು ಜನ ನಿವೇಶನ ರಹಿತರಿದ್ದಾರೆ. ಇವರಿಗೆ ಇಂತಿಷ್ಟು ನಿವೇಶನಗಳು ಬೇಕಾಗಿದೆ ಎಂಬುದನ್ನು ಕೊನೆಯಬಾರಿಗೆ ಯಾವಾಗ ಗುರ್ತಿಸಲಾಗಿತ್ತು ಎಂಬುವನ್ನು ಹೇಳುತ್ತೀರಾ ? ಆವತ್ತು ಇದ್ದಂಥ ಸಂಖ್ಯೆ ಎಷ್ಟು ? ಇವತ್ತು ಇರತಕ್ಕ ಸಂಖ್ಯೆ ಎಷ್ಟು ? ಎಂಬುದನ್ನು ತಿಳಿಸುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಬಿ ಬಸವಲಿಂಗಪ್ಪ : ಮಾನ್ಯ ಸದಸ್ಯರು ಇದಕ್ಕೆ ಬೇರೆ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಹಿಂದೆ ನಾನು ಹೌಸಿಂಗ್ ಮಂತ್ರಿಯಾಗಿದ್ದಾಗ ಈ ಅಂಕಿಅಂಶಗಳನ್ನು ತರಿಸಿಕೊಂಡು ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಹೋದಾಗ ಸುಮಾರು ೬ ಲಕ್ಷ ಜನ ನಿವೇಶನರಹಿತ ಜನರಿದ್ದರು ಆಗ ಸುಮಾರು ೫ ಲಕ್ಷ ಜನರಿಗೆ ನಾವು ನಿವೇಶನಗಳನ್ನು ಹಂಚಿದ್ದೀವೆಂದು ಕಾಣಿಸುತ್ತದೆ. ನಂತರ ಇನ್ನೊಂದುಸಾರಿ ಸರ್ವೆ ಮಾಡಿದಾಗ ೬ ಲಕ್ಷ ಇದ್ದುದು ೯ ಲಕ್ಷ ಆಯಿತು. ಆದ್ದರಿಂದ ಈಗ ನಾನು ಪುನ: ಅಂಕಿ ಅಂಶಗಳನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಮೊದಲು ನಮ್ಮ ಕರ್ನಾಟಕ ರಾಜ್ಯವನ್ನು ತಾವು ಅಪ್-ಟು ಡೇಟ್ ಮಾಡಿಕೊಳ್ಳಿ. ನಿವೇಶನ ರಹಿತ ಸಂಸಾರಗಳು ಎಷ್ಟಿವೆ ಎಂಬುದನ್ನು ಮೊದಲು ಸರ್ವೆ ಮಾಡಿಕೊಳ್ಳಿ.

ಶ್ರೀ ಪಿ. ಜಿ. ಆರ್ ಸಿಂಧ್ಯ : ಮಾನ್ಯ ಅಧ್ಯಕ್ಷರೆ ಮಾನ್ಯ ಮಂತ್ರಿಗಳು ಬಹಳ ಮಹತ್ವರವಾದ ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಹಿಂದೆ ನಾನು ಮಂತ್ರಿಯಾಗಿದ್ದಾಗ, ೨೦ ವರ್ಷಗಳ ಹಿಂದೆ ಒಂದು ಸರ್ವೆ ಮಾಡಿಸಿದ್ದೆ, ನಿವೇಶನಗಳನ್ನು ಹಂಚಿಸಿದ್ದೆ, ಆದರೆ ಈಗ ನನಗೆ ಈ ಅಂಕಿಅಂಶಗಳು ಗೊತ್ತಿಲ್ಲ, ಎಂದು ಉತ್ತರವನ್ನು

ಕೊಟ್ಟರೆ ಬಹುಶ: ಅದು ಸದನಕ್ಕಾಗಲಿ ನಮಗಾಗಲಿ ಸಮಾಧಾನ ಮಾಡಿದಂತಾಗು ವುದಿಲ್ಲ. ನಾನು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇವರ ಅಧಿಕಾರಿಗಳು ಕೊಟ್ಟಂಥ ಉತ್ತರವನ್ನು ತಂದು ಇಲ್ಲಿ ಓದಿ ನಮಗೆ ಸಮಜಾಯಿಷಿ ಮಾಡಲು ಪ್ರಯತ್ನ ಪಡುತ್ತಿದ್ದಾರೆ. ಅಧಿಕಾರಿಗಳು ಯಾವುದೋ ಒಂದು ಉತ್ತರ ವನ್ನು ಬರೆದು ಕೊಡುತ್ತಾರೆ. ಅದನ್ನು ಇವರು ಇಲ್ಲಿ ತಂದು ಓದಿ ನಮಗೆ ಹೇಳು ತ್ತಿದ್ದಾರೆ. ಎಷ್ಟರಲ್ಲಿ ಕೊನೆಯ ಸರ್ವೆಯನ್ನು ಮಾಡಿದರು ಅನಂತರ ಬಹುಶ: ೧೯೮೧ರಲ್ಲಿ ಸರ್ವೆ ಮಾಡಿದರೆಂದು ಕಾಣುತ್ತದೆ ಎಲ್ಲಾ ಪಕ್ಷಗಳವರೂ ಕೂಡ ತಮ್ಮ ತಮ್ಮ ವ್ಯಾನಿಫೆಸ್ಟೋದಲ್ಲಿ "ನಾವು ಫ್ರೀ ಸೈಟುಗಳನ್ನು ಡಿಸ್ಟ್ರಿಬ್ಯೂಷನ್ ಮಾಡು ತ್ತೇವೆ" ಎಂದು ಹೇಳುತ್ತಾರೆ. ಮಾನ್ಯ ವೀರೇಂದ್ರ ಪಾಟೀಲರೂ ಕೂಡ ಮುಖ್ಯ ಮಂತ್ರಿಯಾಗಿ ಬಂದ ದಿವಸವೇ ಒಂದು ತುತ್ತೂರಿಯನ್ನು ಊದಿ ಇನ್ನು ೧ ವರ್ಷ ದೊಳಗೆ ಅಂದರೆ ಬರುವ ರಾಜ್ಯೋತ್ಸವ ಸಂದರ್ಭದಲ್ಲಿ ಹಂಚುತ್ತೇವೆಂದು ಹೇಳಿದರು. ಆ ರಾಜ್ಯೋತ್ಸವವೂ ಆಗಿಹೋಯಿತು. ಅವರೂ ಹೋದರು. ಈಗ ಇನ್ನೊಬ್ಬ ಹೊಸ ಮುಖ್ಯ ಮಂತ್ರಿಗಳು ಬಂದಿದ್ದಾರೆ. ಇವರು ಮುಂದಿನ ರಾಜ್ಯೋತ್ಸವದವರೆಗೂ ಇರುತ್ತಾರೋ ಇಲ್ಲವೋ ನಿವೇಶನಗಳನ್ನು ಹಂಚುತ್ತಾರೋ ಇಲ್ಲವೋ ನೋಡಬೇಕು. ನಾನು ಮಾನ್ಯ ಮಂತ್ರಿಗಳಿಂದ ಬಯಸುವ ಉತ್ತರವಾದರೂ ಇಷ್ಟೇ. ಇವತ್ತು ಹೈಕೋರ್ಟಿನಲ್ಲಿ ಸುಮಾರು ೬೦ ಸಾವಿರಕ್ಕಿಂತ ಹೆಚ್ಚು ಕೇಸುಗಳು ಪೆಂಡಿಂಗ್ ಇವೆ. ಆದ್ದರಿಂದ ನಿಮ್ಮ ಅಡ್ವೋಕೇಟ್ ಜನರಲ್‌ರವರನ್ನು ಕರೆಸಿಕೊಂಡು ಈ ಎಲ್ಲ ಡಿಸ್ ಪ್ಯೂಟಗಳನ್ನೂ ಸೆಟಲ್‌ಮೆಂಟ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯನೇ? ಇದು ಮೊದಲನೆಯ ದು ಇನ್ನು ಎರಡನೆಯದಾಗಿ, ಜನರು ಏತಕ್ಕೆ ಜಮೀನನ್ನು ಬಿಟ್ಟುಕೊಡುತ್ತಿಲ್ಲ ಎಂದರೆ ಸಾಮಾನ್ಯವಾಗಿ ಅರ್ಧ ಎಕರೆ, ಒಂದು ಎಕರೆ ಇಟ್ಟು ಕೊಂಡಿರುವವರು ನಿಮಗೆ ಜಮೀನನ್ನು ಬಿಟ್ಟುಕೊಡುವುದಕ್ಕೆ ಹೊಟ್ಟೆ ಉರಿಯುತ್ತದೆ. ಏಕೆಂದರೆ, ನೀವು ಅವರಿಗೆ ಪರಿಹಾರ ಧನವನ್ನು ಬಹಳ ಕಡಿಮೆ ಕೊಡುತ್ತಿದ್ದೀರಿ. ಆದ್ದರಿಂದ ಈ ಪರಿಹಾರ ಧನವನ್ನು ಹೆಚ್ಚು ಮಾಡುವುದಕ್ಕೆ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ : ತಾವು ಹಿಂದೆ ಹೌಸಿಂಗ ಮಂತ್ರಿಗಳಾಗಿದ್ದಿರಿ ಎಂದು ಕಾಣಿಸುತ್ತದೆ. ತಮ್ಮ ಜ್ಞಾಪಕದ ಆಧಾರದಮೇಲೆ ತಾವು ನನಗೆ ಹೇಳು ತ್ತಿದ್ದೀರಿ. ನನಗೂ ಕೂಡ ಜ್ಞಾಪಕವಿರುವಂತೆ . . . . . .

ಶ್ರೀ ವಾಟಾಳ್ ನಾಗರಾಜ್ : ಇಬ್ಬರಿಗೂ ಕೂಡ ಜ್ಞಾಪಕಶಕ್ತಿ ಕಡಿಮೆ ಯಾಗಿದೆ

Mr. Speaker : It is a question of relativity, ಯಾರಿಗೆ ಜ್ಞಾಪಕ ಶಕ್ತಿ ಹೆಚ್ಚಿಗೆ ಇದೆ, ಯಾರಿಗೆ ಕಡಿಮೆ ಇದೆ ಎಂದು . . . . .

ಶ್ರೀ ಬಿ. ಬಸವಲಿಂಗಪ್ಪ : ಹೈಕೋರ್ಟಿನಲ್ಲಿ ೬೦ ಸಾವಿರ ಕೇಸು ಪೆಂಡಿಂಗ್ ಇರತಕ್ಕ ವಿಚಾರ ನನ್ನ ಗಮನಕ್ಕೆ ಬಂದಿಲ್ಲ.

ಶ್ರಿ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಇದು ಪ್ರಾಮಾಣಿಕವಾದ ಉತ್ತರ ಅಲ್ಲ. ಇದು ಇಡೀ ದೇಶಕ್ಕೆ ಗೊತ್ತಿದೆ. ಎಲ್ಲರಿಗೂ ಗೊತ್ತಿರತಕ್ಕ ವಿಚಾರವನ್ನು ಮಾನ್ಯ ಮಂತ್ರಿಗಳು ಇಲ್ಲಿ ನಿಂತುಕೊಂಡು ನನ್ನ ಗಮನಕ್ಕೇ ಬಂದಿಲ್ಲ ಎಂದು ಉತ್ತರವನ್ನು ಕೊಡತಕ್ಕ ರೀತಿ ಸರಿಯಿಲ್ಲ. ಇಲ್ಲಿರತಕ್ಕ ಯಾವ ಶಾಸಕರಿಗೆ ಇದು ಗೊತ್ತಿಲ್ಲ. ಎಷ್ಟು ಕೇಸುಗಳು ಪೆಂಡಿಂಗ್ ಇವೆ ಎಂಬುದು ನನಗೆ ಗೊತ್ತಿಲ್ಲ ಎಂದು ಹೇಳಿದರೆ ಒಪ್ಪಿಕೊಳ್ಳಬಹುದು, ಆದರೆ ಈ ವಿಚಾರ ನನ್ನ ಗಮನಕ್ಕೇ ಬಂದಿಲ್ಲವೆಂದು ಹೇಳಿದರೆ ಹೇಗೆ ? ಕೇಸುಗಳು ಪೆಂಡಿಂಗ್ ಇರತಕ್ಕದ್ದು ನಿಜ, ಆದರೆ ಎಷ್ಟು ಕೇಸುಗಳು ಎಂಬುದು ಗೊತ್ತಿಲ್ಲ ಇದಕ್ಕೆ ಬೇರೆ ಪ್ರಶ್ನೆಯನ್ನು ಕೇಳಿದರೆ ಉತ್ತರವನ್ನು ಕೊಡುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದರೆ ಚೆನ್ನಾಗಿರುತ್ತಿತ್ತು.

ಶ್ರೀ ಬಿ ಬಸವಲಿಂಗಪ್ಪ : ಹೈ ಕೋರ್ಟಿನಲ್ಲಿರತಕ್ಕ ಕೇಸುಗಳ ಬಗ್ಗೆ ನನಗೆ ವರದಿ ಬಂದಿಲ್ಲ. ಈಗ ತಾವು ಇದನ್ನು ನನ್ನ ಗಮನಕ್ಕೆ ತಂದಿದ್ದೀರಿ. ಇದರ ಬಗ್ಗೆ ವಿಚಾರಮಾಡಿ ತಮಗೆ ಲಿಖಿತ ಮೂಲಕ ಉತ್ತರವನ್ನು ಕಳುಹಿಸಿಕೊಡುತ್ತೇನೆ. ನಾನು ಇದಕ್ಕೆ ವಿಚಾರವನ್ನು ಹೇಳಿದರೆ ತಾವು ನನ್ನ ಮೇಲೆ ಏತಕ್ಕೆ ಅನುಮಾನಪಡುತ್ತೀರಿ? ಜಮೀನಿಗೆ ಪರಿಹಾರ ಧನವನ್ನು ಹೆಚ್ಚು ಕೊಡುವ ಬಗ್ಗೆ ಇನ್ನೂ ನಾನು ಗಮನಹರಿಸಿಲ್ಲ ನಾನು ವಕೀಲನಾಗಿ ಕೆಲಸಮಾಡಿರುವುದರಿಂದ ನನಗೂ ಗೊತ್ತಿದೆ, ಮಾನ್ಯ ಸದಸ್ಯರಿಗೂ ಗೊತ್ತಿದೆ, ಪರಿಹಾರ ಧನವನ್ನು ಕೊಡಬೇಕಾದರೆ ಕೆಲವು ರೂಲ್ಸ್ ಇವೆ. ಇದಕ್ಕಾಗಿಯೇ ಕೆಲವು ಅಧಿಕಾರಿಗಳಿದ್ದಾರೆ. ಅವರು ಈ ಕೆಲಸವನ್ನು ಮಾಡಬೇಕಾಗುತ್ತದೆ. ಇದರ ಬಗ್ಗೆ ಕೋರ್ಟುಗಳು ತೀರ್ಮಾನ ಮಾಡುತ್ತವೆ. ಈ ಪರಿಹಾರ ಧನವನ್ನು ಕೊಡುತ್ತಿರುವುದು ಕಡಿಮೆ ಇದೆಯೆ ? ಹೆಚ್ಚಾಗಿದೆಯೆ ? ಎಂಬುದನ್ನು ವಿಚಾರ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ೧೯೪(೭೯)ನೆಯ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಸ್ವಲ್ಪ ಸಮಯಬೇಕೆಂದು ಕೇಳಿದ್ದೇನೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ, ಇದು ಬಹಳ ಸರಳವಾದ ಪ್ರಶ್ನೆ. ದಯವಿಟ್ಟು ತಾವು ಓದಿ ನೋಡಿ.

ಅಧ್ಯಕ್ಷರು :– ಕೋಲಾರದ ವಿಚಾರವೆಂದರೆ ಅಷ್ಟು ಸುಲಭವಾದ ಪ್ರಶ್ನೆಯಲ್ಲ, ಅದು ಯಾವಾಗಲೂ ಬಿಗಡಾಯಿಸುವ ಪ್ರಶ್ನೆಯೇ ಆಗಿರುತ್ತದೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ ಇದಕ್ಕಿಂತ ಸರಳವಾದ ಪ್ರಶ್ನೆಯನ್ನು ಕೇಳುವುದಕ್ಕಾಗುವುದಿಲ್ಲ. ಇಂಥ ಒಂದು ಪ್ರಶ್ನೆಗೂ ಸಮಯ ಬೇಕೆಂದು ಕೇಳಿದರೆ ಹೇಗೆ? ಪ್ರಶ್ನೆಯನ್ನು ಓದಿದರೆ ಗೊತ್ತಾಗುತ್ತದೆ. ಇದಕ್ಕಿಂತ ಸರಳವಾದ ಪ್ರಶ್ನೆ ಇರುವುದಕ್ಕೆ ಸಾಧ್ಯವಿಲ್ಲ. ಇಂಥ ಪ್ರಶ್ನೆಗೂ ಸಮಯಬೇಕೆಂದು ಮಾನ್ಯ ಸಚಿವರು ಕೇಳಿದರೆ ಇದಕ್ಕೆ ನಾವು ಏನು ಹೇಳುವದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ಎತ್ತಿರುವ ವಿಷಯ ಮನವರಿಕೆಯಾಗಿದೆ. ಅದಕ್ಕೆ ಉತ್ತರವನ್ನು ಒದಗಿಸಿಲ್ಲ, ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ ಇದನ್ನು ತಾವು ಒಪ್ಪುತ್ತೀರಾ? ಅವರು ಕೊಡುತ್ತಿರುವ ಉತ್ತರಕ್ಕೆ ನಾವು ಏನು ಹೇಳುವುದಕ್ಕಾಗುತ್ತದೆ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಸದಸ್ಯರಲ್ಲಿ ವಿನಂತಿ. ದಯವಿಟ್ಟು ಒಬ್ಬೊಬ್ಬರೇ ಮಾತನಾಡಿ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ಬಾಯಿ ಮಾತಿನಲ್ಲಿ ಹೇಳುವ ಉತ್ತರವನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳುವುದಾದರೆ ಹೇಳುತ್ತೇನೆ.

(ನಾಲ್ಕಾರು ಜನ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುವರು)

ಅಧ್ಯಕ್ಷರು :– ಎಲ್ಲಾ ಮಾನ್ಯ ಸದಸ್ಯರು ದಯವಿಟ್ಟು ತಮ್ಮ ಪೀಠವನ್ನು ಅಲಂಕರಿಸಿ. ಮಾನ್ಯ ಮಂತ್ರಿಗಳ ಪ್ರಾಮಾಣಿಕವಾದ ಅನಿಸಿಕೆ ಏನೆಂದರೆ ಅವರು ಹತಾಶನಾಗಿದ್ದೇನೆಂದು ಹೇಳುತ್ತಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ :– ಮಾನ್ಯ ಸಚಿವರು ನಾನು ಏನು ಮಾಡಲಿ ಎಂದು ಹೇಳುವುದು ಸರಿಯಲ್ಲ. ಅದು ಅವರ ಪ್ರಾಮಾಣಿಕತೆಯನ್ನು ತೋರಿದಂತಾಗುವುದಿಲ್ಲ. ಅದು ಬೇಜವಾಬ್ದಾರಿಯಾಗುತ್ತದೆ.

ಅಧ್ಯಕ್ಷರು :– ಮಾನ್ಯ ಮಂತ್ರಿಗಳು, ಕಾನೂನಿನ ಚೌಕಟ್ಟಿನಲ್ಲಿ ನಾನು ಬಲವಂತ ಮಾಡಲಿಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟ ಉತ್ತರವನ್ನು ನಾವು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಸಚಿವರು ನಾನು ಏನು ಮಾಡಲಿ ಎಂದರೆ ಸರ್ಕಾರದವರು ಏನು ಕೆಲಸ ಮಾಡುತ್ತಿದ್ದಾರೆಂದು ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಸರ್ಕಾರ ಅವರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎನ್ನುವ ಬಗ್ಗೆ ಉತ್ತರವನ್ನು ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ :– ಇನ್ನು ಒಂದೆರಡು ಮೂರು ದಿವಸಗಳಲ್ಲಿಯೇ ಉತ್ತರವನ್ನು ತರಿಸಿಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು :– ಮಾನ್ಯ ಸದಸ್ಯರು ಸ್ವಲ್ಪ ಸಮಾಧಾನ ಮಾಡಿಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಸಚಿವರು ನಾನು ಏನು ಮಾಡಲಿ ಎಂದು ಉತ್ತರವನ್ನು ಕೊಡುತ್ತಿದ್ದಾರೆ.....

ಶ್ರೀ ಎಸ್. ಎಚ್. ಕೌಜಲಗಿ :– ಮಾನ್ಯ ಸಚಿವರು ನಾನೇನು ಮಾಡಲಿ ಎಂದು ಹೇಳುವುದು ಸರಿಯಲ್ಲ.

ಅಧ್ಯಕ್ಷರು :– ಮಾನ್ಯ ಕೌಜಲಗಿಯವರು ತಾಪು ಬಹಳ ಸಮಾಧಾನಸ್ತರು. ಅವರು ತಿದ್ದುಪಡಿ ತರುವುದಕ್ಕೆ ಅವಕಾಶವನ್ನು ಕೊಡಿ. ಅವರು ನಾನೇನು ಮಾಡಲಿ ಎಂದಾಕ್ಷಣಕ್ಕೆ ಅವರ ಮೇಲೆ ತಾವು ವ್ಯಾಜ್ಯಕ್ಕೆ ಹೋಗುತ್ತಿದ್ದೀರಾ.

ಅಧ್ಯಕ್ಷರು :– ಮಾನ್ಯ ಸಚಿವರು ಇವಕ್ಕೂ ಚುಕ್ಕೆ ಪ್ರಶ್ನೆ ೧೫೫(ಟಿಎಚ್) ಗೆ ಸಮಯ ಕೇಳುತ್ತಿದ್ದಾರೆ. ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ. ಜಿಲ್ಲಾ ಪರಿಷತ್‌ಗಳ ವಿಚಾರದಲ್ಲಿ ಇದುವರೆವಿಗೂ ಯಾವುದೇ ಪ್ರಶ್ನೆಗಳು ಬಂದಾಗಲೂ ಕೂಡ ಸರ್ಕಾರದಿಂದ ಏನು ರೊಟೀನ್ ಆಗಿ ಉತ್ತರ ಬರುತ್ತದೆಂದರೆ ನಮಗೆ ಅಂಕಿ ಅಂಶಗಳು ಸರಿಯಾಗಿ ಬರುತ್ತಿಲ್ಲವೆನ್ನುವುದು. ಅದಕ್ಕೆ ಜಿನಿಯನ್ ಡಿಫಿಕಲ್ಟಿ ಏನು ಎನ್ನುವುದನ್ನು ಹೇಳಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ :– ಮಾನ್ಯ ಅಧ್ಯಕ್ಷರೇ, ಉತ್ತರಗಳು ಯಾವು ಯಾವುದಕ್ಕೆ ಬಂದಿರುವುದಿಲ್ಲ ಅದಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದೇನೆ. ಅದಕ್ಕೆ ಕಾರಣಗಳನ್ನೂ ಹೇಳುತ್ತಿದ್ದೇನೆ. I will take action now to warn the Officers to keep answers ready and then make them available to the House. ದಯವಿಟ್ಟು ಇವತ್ತು ಯಾವು ಯಾವುದಕ್ಕೆ ಉತ್ತರಗಳು ಬಂದಿರುತ್ತದೆಯೋ ಅದನ್ನು ಹಾಕಿಕೊಂಡರೆ ಒಳ್ಳೆಯದೆಂದು ಹೇಳುತ್ತೇನೆ.

೧೧-೩೫ ಎ. ಎಂ.

ಅಧ್ಯಕ್ಷರು :– ನನ್ನ ಪ್ರಶ್ನೆ ಇಷ್ಟೇ, ಪ್ರತಿಯೊಂದು ಜಿಲ್ಲಾ ಪರಿಷತ್ತಿನಲ್ಲೂ you have the Senior Officers from IAS cadre as Chief Secretary and he is duty bound to provide replies in time and if any Chief Secretary doesn't do, he needs to be pulled up. The House cannot wait for such a long time to get answers.

Sri B. Basavalingappa :– I request you to postpone this question for 2–3 days and before the end of this Session, we can take up these questions.

ಶ್ರೀ ಎಸ್. ಹೆಚ್. ಕೌಜಲಗಿ :– ಇವತ್ತೇ ಸಸ್ಪೆಂಡ್ ಮಾಡಿ.

Mr. Speaker :– I hope the Hon'ble Minister has taken note of sentiments of the House.

Sri. K. H. Patil :– Question No. 841. This does not come to my department. This is to be answered by the Sericulture Minister.

ಅಧ್ಯಕ್ಷರು :- ಈ ಪ್ರಶ್ನೆಯನ್ನು ನೀವು ರೇಷ್ಮೆ ಸಚಿವರಿಗೆ ಕಳುಹಿಸಬೇಕಾಗಿತ್ತು ಎಂದು ಹೇಳುತ್ತಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್ :- ಸಿಲ್ಕ್ ಫ್ಯಾಕ್ಟರಿಯಲ್ಲಿರುವ ನೌಕರರ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ ಆದ್ದರಿಂದ ಇದು ನಮ್ಮ ಸಹಕಾರ ಇಲಾಖೆಗೆ ಬರುವುದಿಲ್ಲ.

ಶ್ರೀ ಕೆ. ಎಂ. ಪುಟ್ಟು :- ಈ ಕಾರ್ಖಾನೆ ಸಹಕಾರ ಸಂಘದ ಬೈಲಾ ಅಡಿಯಲ್ಲೇ ಆಗಿರುವುದರಿಂದ ಈ ಪ್ರಶ್ನೆ ಇವರಿಗೇ ಬರುತ್ತದೆ. ಫ್ಯಾಕ್ಟರಿ ವಿಷಯ ಬಂದಾಗ ಕಳೆದ ಸಾರಿಯೂ ಪೋಸ್ಟ್‌ಪೋನ್ ಆಯಿತು. ಈ ವಲಯವನ್ನು ಅಧಿಕಾರಿಗಳು ಕೇಂದ್ರೀಕೃತ ಮಾಡಿಕೊಂಡು ಮಂತ್ರಿಗಳಿಗೆ ಅಂಕಿ ಅಂಶಗಳನ್ನು ಒದಗಿಸುವುದಕ್ಕೆ ಆಸ್ಪದ ಕೊಡುತ್ತಿದ್ದಾರೋ ಇಲ್ಲವೋ ಎಂದು ಸಂಶಯ ಬಂದಿದೆ.

ಅಧ್ಯಕ್ಷರು :- ಸಿಲ್ಕ್ ಫ್ಯಾಕ್ಟರಿ ಕೋ-ಆಪರೇಟೀವ್ ಲೈಟ್ಸಿನ ಅಡಿಯಲ್ಲಿ ನಿರ್ಮಾಣವಾಗಿದೆಯೆ?

ಶ್ರೀ ಕೆ ಹೆಚ್. ಪಾಟೀಲ್:- ಸಿಲ್ಕ್ ಫ್ಯಾಕ್ಟರಿ ನೌಕರರು ಕೋ-ಆಪರೇಟೀವ್ ಸೆಕ್ಟಾರನಲ್ಲಿ ಬರುವುದಿಲ್ಲ.

ಶ್ರೀ ಕೆ. ಎಂ. ಪುಟ್ಟು :- ಸಹಕಾರ ಸಂಘದ ಬೈಲಾ ಅಡಿಯಲ್ಲಿ ಈ ಕಾರ್ಖಾನೆ ಇದೆ. ಆದ್ದರಿಂದ ಎರಡು ಇಲಾಖೆಗಳಿಗೂ ಸಂಬಂಧ ಇದೆ. ಮೆಂಬರ್‌ಷಿಪ್ ಸಹಕಾರ ಸಂಘದ ಬೈಲಾ ಅಡಿಯಲ್ಲಿ ಆಗಿರುವುದು. ಸಹಕಾರ ಇಲಾಖೆಯಲ್ಲಿ ಮೆಂಬರ್‌ಷಿಪ್ ಅನ್ನು ಯಾವ ಪ್ರಕಾರ ಮಾಡಬೇಕೆಂದು ಇದೆ ಆ ಪ್ರಕಾರವೇ ಮಾಡಿದ್ದಾರೆ. ಕೋ-ಆಪರೇಟೀವ್ ಎಂದು ಏನಿದೆ ಅದನ್ನು ಕಿತ್ತು ಹಾಕಿದರೆ ಅನುಕೂಲವಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್ :- ಮಂಡ್ಯ ಜಿಲ್ಲೆ, ಮಳವಳ್ಳಿ ತಾಲೂಕಿನಲ್ಲಿರುವ ಭಾರತ ಸಿಲ್ಕ್ ಫ್ಯಾಕ್ಟರಿಯಲ್ಲಿರುವ ಸದಸ್ಯರ ಸಂಖ್ಯೆ ಎಷ್ಟು ಎಂದರೆ ಅದಕ್ಕೆ ನಾನು ಉತ್ತರ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಂ. ಪುಟ್ಟು:- ಫ್ಯಾಕ್ಟರಿ ಇನ್ನೂ ಪ್ರಾರಂಭ ಆಗಿಲ್ಲ. ಭಾರತ್ ಸಿಲ್ಕ್ ಫ್ಯಾಕ್ಟರಿ ಏನಿದೆ ಇದು ರೇಷ್ಮೆ ಬೆಳಿಗಾರರ ಅಭಿವೃದ್ಧಿ ಸಹಕಾರ ಸಂಘ ಎಂದು ರಿಜಿಸ್ಟರ ಆಗಿರುವುದು. ಅದರ ಮೆಂಬರ್‌ಷಿಪ್ ಏನು ಬರುತ್ತದೆ ಅದು ಕೋ-ಆಪರೇಟೀವ್ ಬೈಲಾ ಅಡಿಯಲ್ಲಿ ಬರುತ್ತದೆ.

ಅಧ್ಯಕ್ಷರು :- ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ಕಳುಹಿಸುತ್ತಾರೆ.

ಶ್ರೀ ಕೆ. ಎಂ. ಪುಟ್ಟು :- ಇಲ್ಲಿ ಸದಸ್ಯರು ಎಂದು ಪ್ರಿಂಟ ಮಾಡಿ ನೌಕರರು ಎಂದು ಹೇಳುತ್ತಿದ್ದಾರಲ್ಲ. ಆ ಕಾರ್ಖಾನೆಗೆ ಯಾವ ನೌಕರರನ್ನು ತೆಗೆದುಕೊಂಡಿದ್ದಾರೆ?

ಅಧ್ಯಕ್ಷರು :- ೧೯೬೫ರಲ್ಲಿ ೨೦೦ ಜನ ಸದಸ್ಯರನ್ನು ತೆಗೆದುಕೊಂಡು ಅವರು ನೀಡಿರುವ ಸದಸ್ಯತ್ವದ ಮೊಬಲಗನ್ನು ನಗದು ಪುಸ್ತಕಕ್ಕೆ ಜಮೆ ಮಾಡಿಕೊಳ್ಳಲಾಗಿದೆಯೇ ಎಂದು ಕೇಳಿದ್ದಾರಲ್ಲ.

Sri K. H. Patil :- They have never referred to society, if the Hon'ble Member has in mind that they have not registered, I will take care that they are registered.

ಶ್ರೀ ಪಿ. ಜಿ. ಆರ್. ಸಿಂಧ್ಯ :- ಇದಕ್ಕೆ ಸ್ಪೇಷಲ್ ಕಾಂಪೋನೆಂಟ್ ಸ್ಕೀಂನಲ್ಲಿ ಹಣ ಕೊಡಬೇಕೆಂದು ಮಾಡಿ ರಾಜ್ಯ ಸರ್ಕಾರದವರು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದವರು ಕೂಡ ಕೊಡಬೇಕೆಂದು ಮಾಡಿದ್ದಾರೆ. ಆದುದರಿಂದ ಇದು ಸೋಷಯಲ್ ವೆಲ್‌ಫೇರ ಡಿಪಾರ್ಟಮೆಂಟಿಗೆ ಬರುತ್ತದೆ.

ಅಧ್ಯಕ್ಷರು :- ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನಲ್ಲಿರುವ ಕೋ ಅಪರೇಟಿವ ಸೊಸೈಟಿ ಎಂದು ಸೇರಿಸಿದ್ದರೆ ಈ ಗೊಂದಲಕ್ಕೆ ಕಾರಣ ಇರುತ್ತಿರಲಿಲ್ಲ. ನೀವು ಫ್ಯಾಕ್ಟರಿ ಎಂದು ಹೇಳಿದರಿ ಅವರು, ಫ್ಯಾಕ್ಟರಿಯೇ ಇಲ್ಲವಲ್ಲ, ನೌಕರರನ್ನು ಎಲ್ಲಿಂದ ತರಲಿ ಎಂದು ಹುಡುಕಾಡುತ್ತಿದ್ದಾರೆ ನೀವು ಇದಕ್ಕೆ ಬೇರೆ ಪ್ರಶ್ನೆ ಕೇಳಿ, ಉತ್ತರಿಸುತ್ತಾರೆ.

ವಿಷಯ : ಜವಾಹರ ರೋಜ್ಗಾರ್ ಯೋಜನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೧೯೭(೬೪೭)

ಶ್ರೀ ಸಾದತ್ ಅಲಿ ಖಾನ (ಚನ್ನಪಟ್ಟಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜವಾಹರ ರೋಜ್‌ಗಾರ್‌ನಲ್ಲಿ ಬರುವ ಯೋಜನೆಗಳಾವವು ?

ಆ) ಈ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು ? (ಜಾತಿವಾರು ವಿವರಗಳ ಮಾಹಿತಿ ನೀಡುವುದು)

ಇ) ಜವಾಹರ್ ರೋಜ್‌ಗಾರ ಯೋಜನೆಯಡಿಯಲ್ಲಿ ಮ್ಯಾಂಡೇಸ್‌ಗಳನ್ನು ಮಾಡಿರುವ ಸಂಖ್ಯೆ ಎಷ್ಟು ?

ಶ್ರೀ.ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಮೂರು

ಜವಾಹರ್ ರೋಜಗಾರ್ ಯೋಜನೆ ಮತ್ತು ಇದರ ಅಡಿಯಲ್ಲಿ ಬರುವ ಎರಡು ಉಪ ಯೋಜನೆಗಳು ದಶಲಕ್ಷ ಬಾವಿಗಳ ಯೋಜನೆ ಮತ್ತು ಇಂದಿರಾ ಆವಾಸ ಯೋಜನೆ.